# ಕುವೆಂಪು ವಿಶ್ವವಿದ್ಯಾಲಯ

## ಪಠ್ಯೇತರ ಚಟುವಟಿಕೆ ವಿಭಾಗ

## ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451

---

**ಡಾ.ವೆಂಕಟೇಶ** ಎಂ.ಎಸ್ಸಿ.,ಪಿಎಚ್.ಡಿ
**ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ**
ಮೋ::09482448927, ಇ.ಮೇಲ್: :vensmath@gmail.com

ಸಹಾಯಕ ಪ್ರಾಧ್ಯಾಪಕರು,
ಗಣಿತಶಾಸ್ತ್ರ ವಿಭಾಗ

---

**ಸಂ.ಕುವಿ/ಪಚವಿ/125 /2018-19** **ದಿನಾಂಕ: 13-08-2018**

**ಗೆ,**
**ಮಾನ್ಯ ಪ್ರಾಂಶುಪಾಲರುಗಳಿಗೆ,**

**ಮಾನ್ಯರೇ,**

**ವಿಷಯ:** ದಿನಾಂಕ 20.08.2018ರ ಸೋಮವಾರ "ಸದ್ಭಾವನಾ ದಿನ"ವನ್ನಾಗಿ ಆಚರಿಸುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಎಲ್ಲಾ ಧರ್ಮ, ಭಾಷೆ ಹಾಗೂ ರಾಜ್ಯಗಳ ಜನರಲ್ಲಿ ಸೌಹಾರ್ದತೆಯನ್ನು ಉತ್ತೇಜಿಸಿ ಎಲ್ಲರಲ್ಲೂ ಸದ್ಭಾವನೆಯನ್ನು ಮೂಡಿಸಿ ಹಿಂಸಾಚಾರವನ್ನು ತ್ಯಜಿಸುವಂತೆ ಮಾಡಲು ಕೇಂದ್ರ ಸರ್ಕಾರದ ಆದೇಶದಂತೆ, ರಾಜ್ಯ ಸರ್ಕಾರವು ಸಹ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಎಲ್ಲಾ ಕಾಲೇಜುಗಳಲ್ಲೂ ದಿನಾಂಕ 20.08.2018ರ ಸೋಮವಾರ **"ಸದ್ಭಾವನಾ ದಿನ"**ವನ್ನಾಗಿ ಆಚರಿಸುವಂತೆ ತಿಳಿಸಿದ್ದು, ತಾವುಗಳು ತಮ್ಮ ಕಾಲೇಜುಗಳಲ್ಲಿ ದಿನಾಂಕ 20.08.2018ರ ಸೋಮವಾರದಂದು "ಸದ್ಭಾವನಾ ದಿನ"ವನ್ನಾಗಿ ಆಚರಿಸಿ, ಕಾರ್ಯಕ್ರಮ ನಡೆಸಿದ ಬಗ್ಗೆ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಹಾಗೂ ಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ. ಈ ಕಾರ್ಯಕ್ರಮಕ್ಕೆ ಸಂಬಂದಿಸಿದ ಸರ್ಕಾರದ ಸುತ್ತೋಲೆ/ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ವೆಂಕಟೇಶ)**
**ಸಂಚಾಲಕರು**

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 01 ರಾಐಸ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ, ಬೆಂಗಳೂರು,
ದಿನಾಂಕ: 02.08.2018.

## *ಸುತ್ತೋಲೆ*

ವಿಷಯ: ದಿನಾಂಕ **20.8.2018** ರ ಸೋಮವಾರ **"ಸದ್ಭಾವನಾ ದಿನ"** ವನ್ನಾಗಿ ಆಚರಿಸುವ ಬಗ್ಗೆ.

*****

ಎಲ್ಲಾ ಧರ್ಮ, ಭಾಷೆ ಹಾಗೂ ರಾಜ್ಯಗಳ ಜನರಲ್ಲಿ ಸೌಹಾರ್ದತೆಯನ್ನು ಉತ್ತೇಜಿಸಿ ಎಲ್ಲರಲ್ಲೂ ಸದ್ಭಾವನೆಯನ್ನು ಮೂಡಿಸಿ ಹಿಂಸಾಚಾರವನ್ನು ತ್ಯಜಿಸುವಂತೆ ಮಾಡಲು ಕೇಂದ್ರ ಸರ್ಕಾರದ ಆದೇಶದಂತೆ, ಪ್ರತಿವರ್ಷ **20ನೇ** ಆಗಸ್ಟ್ ರಂದು ಸದ್ಭಾವನ ದಿನವನ್ನಾಗಿ ಆಚರಿಸಲಾಗುತ್ತಿದೆ. ಈ ಸಾಲಿನಲ್ಲಿ, ದಿನಾಂಕ **20.8.2018** ಸೋಮವಾರದಂದು ಸದ್ಭಾವನಾ ದಿನವನ್ನಾಗಿ ರಾಜ್ಯಾದ್ಯಂತ ಆಚರಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಸಂಬಂಧವಾಗಿ ಭಾರತ ಸ್ಕೌಟ್ಸ್ ಅಂಡ್ ಗೈಡ್ಸ್ ಮತ್ತು ಯೂತ್ ಅಸೋಸಿಯೇಷನ್ ಸಹಕಾರದೊಂದಿಗೆ ರಾಜ್ಯದ ವಿಭಾಗ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿ ಸದ್ಭಾವನಾ ದಿನವನ್ನು ಆಚರಿಸುವುದರೊಂದಿಗೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂದು ಕೂಡ ಸೂಚಿಸಲಾಗಿದೆ. ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳ ಅಧೀನದಲ್ಲಿರುವ ಕಾಲೇಜುಗಳ ಮತ್ತು ಎಲ್ಲಾ ಶಾಲೆಗಳಲ್ಲಿ ದಿನಾಂಕ **20.8.2018** ರಂದು ಸದ್ಭಾವನಾ ದಿನಾಚರಣೆಯನ್ನು ಆಚರಿಸಬೇಕೆಂದು ಸಂಬಂಧಪಟ್ಟರಿಗೆ ಸೂಕ್ತ ಸೂಚನೆಗಳನ್ನು ನೀಡತಕ್ಕದ್ದು.

ಕಾರ್ಯಕ್ರಮವನ್ನು ನಡೆಸಿದ ಬಗ್ಗೆ ಸರ್ಕಾರಕ್ಕೆ ಒಂದು ಅನುಪಾಲನಾ ವರದಿಯನ್ನು ಕಳುಹಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಆಯಾ ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿದೆ.

ಕೆ.ಎಸ್. ರೋಹಿಣಿ

(ಕೆ.ಎಸ್. ರೋಹಿಣಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ರಾಜಕೀಯ)

<u>ಇವರಿಗೆ:</u>

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
2. ಸ್ಥಾನಿಕ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳು.

<u>*ಪ್ರತಿ:*</u>

ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ) ಇವರಿಗೆ ಸೂಕ್ತ ಕ್ರಮಕ್ಕಾಗಿ.

No. J-17011/151/2018-NPYAD
Government of India
Ministry of Youth Affairs & Sports
Department of Youth Affairs
*****

Shastri Bhawan, New Delhi.
Dated the 05th July, 2018.

## OFFICE MEMORANDUM

**Subject: Observance of 'Sadbhavana Diwas' on 20th August, 2018.**

The birth anniversary of Prime Minister Late Rajiv Gandhi on 20th August is observed as "Sadbhavana Diwas" every year. The theme of Sadbhavana is to promote National Integration and Communal Harmony among people of all religions, languages and regions. The idea behind observance of 'Sadbhavana Diwas" is to eschew violence and to promote goodwill among the people.

This year, the Sadbhavana Pledge taking ceremony may be observed on 20th August, 2018. An appropriate function may be organized in which all employees of the Ministry/Departments/Organisation be associated and "Sadbhavana Pledge" be administered. The text of the pledge is given over-leaf.

(Thanglemlian)
Director

(T.M. VIJAY BHASKAR)
Chief Secretary

Encl.: Text of Sadbhavana Pledge (over-leaf)

To

Union Ministries/Departments, State Governments etc.

(As per list attached).

## सद्भावना दिवस प्रतिज्ञा

मैं प्रतिज्ञा करता/करती हूँ कि मैं जाति, सम्प्रदाय, क्षेत्र, धर्म, अथवा भाषा का भेदभाव किए बिना सभी भारतवासियों की भावनात्मक एकता और सद्भावना के लिए कार्य करूँगा/करूँगी। मैं पुनः प्रतिज्ञा करता/करती हूँ कि मैं हिंसा का सहारा लिए बिना सभी प्रकार के मतभेद बातचीत और संवैधानिक माध्यमों से सुलझाउंगा/सुलझाउंगी।

## SADBHAVANA DAY PLEDGE

I take this solemn pledge that I will work for the emotional oneness and harmony of all the people of India regardless of caste, region, religion or language. I further pledge that I shall resolve all differences among us through dialogue and constitutional means without resorting to violence.

## ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.